# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು - 572 103

ಸಂಖ್ಯೆ: ತುವಿ:ಶೈವಿ:2025-26: 71 ದಿನಾಂಕ: 02.04.2026

"ಅತಿ ಜರೂರು"

## ನೆನಪೋಲೆ

**ವಿಷಯ** : ಮಕ್ಕಳ ಸಹಾಯವಾಣಿ ಸಂಖ್ಯೆ : 1098ನ್ನು ಕಡ್ಡಾಯವಾಗಿ ಶಾಶ್ವತ ಫಲಕವನ್ನು ಪ್ರಕಟಿಸುವ ಬಗ್ಗೆ ಅನುಪಾಲನಾ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** 1. ಸಂಖ್ಯೆ: ಇಡಿ 239 ವಿವಿಧ 2025, ಬೆಂಗಳೂರು ದಿನಾಂಕ: 06.11.2025.
2. ಸಂಖ್ಯೆ:ತುವಿ:ಶೈವಿ:2025-26:2546 ದಿನಾಂಕ:18.11.2025.
3. ಸಂಖ್ಯೆ: ಇಡಿ 239 ವಿವಿಧ 2026, ಬೆಂಗಳೂರು ದಿನಾಂಕ: 17.03.2026.
4. ಸಂಖ್ಯೆ:ತುವಿ:ಶೈವಿ:2025-26:4022 ದಿನಾಂಕ:27.03.2026.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದನ್ವಯ, **ಮಕ್ಕಳ ಸಹಾಯವಾಣಿ ಸಂಖ್ಯೆ :1098ನ್ನು ಕಡ್ಡಾಯವಾಗಿ ಶಾಶ್ವತ ಫಲಕದಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳುವಂತೆ** ಉಲ್ಲೇಖ(2)ರ ಪತ್ರದಲ್ಲಿ ಬರೆಯಲಾಗಿತ್ತು. ನಂತರ ಉಲ್ಲೇಖ(3)ರ ಸರ್ಕಾರದ ಪತ್ರದನ್ವಯ ಉಲ್ಲೇಖ(4)ರಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡಲು ತಿಳಿಸಲಾಗಿ ಬಹುತೇಕ ಕಾಲೇಜುಗಳಿಂದ ಮಾಹಿತಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಕೆಯಾಗಿರುತ್ತದೆ. ಸದರಿ ಮಾಹಿತಿಯನ್ನು ಕ್ರೋಢೀಕರಿಸಿ ಉನ್ನತ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ.

ಆದರೆ ಕೆಲವು ಕಾಲೇಜು/ಸ್ನಾತಕೋತ್ತರ ವಿಭಾಗಗಳಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ. ಆದ್ದರಿಂದ **ಮಕ್ಕಳ ಸಹಾಯವಾಣಿ ಸಂಖ್ಯೆ :1098ನ್ನು ಕಡ್ಡಾಯವಾಗಿ ತಮ್ಮ ಕಾಲೇಜುಗಳಲ್ಲಿ ಶಾಶ್ವತ ಫಲಕದಲ್ಲಿ ಪ್ರಕಟಿಸಿರುವ ಬಗ್ಗೆ ಹಾಗೂ ಈ ಕುರಿತು ಕೈಗೊಂಡ ಕ್ರಮಗಳ ಬಗ್ಗೆ** ದಿನಾಂಕ:**04.04.2026**ರ **5-00** ಗಂಟೆಯೊಳಗೆ ಲಿಖಿತ ರೂಪದಲ್ಲಿ ವಿಶ್ವವಿದ್ಯಾನಿಲಯಕ್ಕೆ **ಕಡ್ಡಾಯವಾಗಿ** ಸಲ್ಲಿಸುವಂತೆ ತಿಳಿಸಲಾಗಿದೆ. ಒಂದು ವೇಳೆ ಸದರಿ ಕ್ರಮದ ಕುರಿತು ನಿಗದಿತ ಸಮಯದೊಳಗೆ ಮಾಹಿತಿ ಸಲ್ಲಿಕೆಯಾಗದಿದ್ದಲ್ಲಿ ಅಂತಹ ಕಾಲೇಜಿನಲ್ಲಿ ಅನುಷ್ಠಾನವಾಗಿಲ್ಲವೆಂದು ಪರಿಗಣಿಸಿ ಅಂತಹ **ಕಾಲೇಜು/ವಿಭಾಗಗಳ ಹೆಸರುಗಳನ್ನು ನಮೂದಿಸಿರುವ ಮಾಹಿತಿಯನ್ನು** ಉನ್ನತ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು ಇವರಿಗೆ ಒದಗಿಸಲಾಗುವುದು. ಇದರಿಂದ ಉಂಟಾಗುವ ಮುಂದಿನ ಪರಿಣಾಮಗಳಿಗೆ ತಾವೇ ಜವಾಬ್ದಾರರಾಗುತ್ತೀರಿ ಎಂದು ಈ ಮೂಲಕ ತಿಳಿಸಿದೆ.

**ವಿಶೇಷ ಸೂಚನೆ** : ಸದರಿ **ಮಾಹಿತಿಯನ್ನು dracademictut.gmail.com** ಗೆ **ಅಥವಾ ಶೈಕ್ಷಣಿಕ ವಿಭಾಗಕ್ಕೆ ನೇರವಾಗಿ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ.**

ಉಪಕುಲಸಚಿವರು
ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಅಧ್ಯಕ್ಷರು/ಸಂಯೋಜಕರು ಸ್ನಾತಕೋತ್ತರ ಅಧ್ಯಯನ ಕೇಂದ್ರ ಮತ್ತು ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸಂಯೋಜಿತ ಕಾಲೇಜುಗಳು (ಸ್ನಾತಕ ಮತ್ತು ಸ್ನಾತಕೋತ್ತರ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಪ್ರತಿಗಳು:**

1. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.-ಇ-ಮೇಲ್ ಮೂಲಕ ಕಳುಹಿಸುವುದು.
2. ಕಚೇರಿ ಪ್ರತಿ.